## ಅವಳಿ




**ಸರ್ಬಿಯಾದ** ಮಿಲುತಿನ್ ದ್ಯೂರಿಕೋವಿಕ್‌ರ 'ದಿ ಅಡ್ವೆಂಚರ್ಸ್ ಆಫ್ ಟ್ವಿನ್ಸ್' – ಮಕ್ಕಳ ಕಥೆಗಳ ಸಂಕಲನ 'ಅವಳಿ' ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ. ವಿಶ್ವದ 52 ಭಾಷೆಗಳಿಗೆ ಅನುವಾದಗೊಂಡಿರುವ ಮಿಲುತಿನ್‌ರ ಕೃತಿ, ಕನ್ನಡದ ಮೂಲಕ ಭಾರತವನ್ನು ಪ್ರವೇಶಿಸಿದೆ. ಮಕ್ಕಳ ಸಾಹಿತ್ಯ ರಚನೆ ಹಾಗೂ ಅಧ್ಯಯನದಲ್ಲಿ ತೊಡಗಿರುವ ಬಳ್ಳಾರಿಯ ಕೆ. ಶಿವಲಿಂಗಪ್ಪ ಹಂದಿಹಾಳು, ದೂರದೇಶದ ಕಥೆಗಳನ್ನು ಕನ್ನಡದ ಮಕ್ಕಳಿಗೆ ಹತ್ತಿರವಾಗುವಂತೆ ರೂಪಾಂತರಿಸಿದ್ದಾರೆ.

ಅವಳಿ ಮಕ್ಕಳ ಬಾಲ್ಯದ ಘಟನೆಗಳ ನಿರೂಪಣೆ ಇಲ್ಲಿನ ಪುಟ್ಟ ಪುಟ್ಟ ಪ್ರಸಂಗಗಳಲ್ಲಿದೆ. ಶಾಲೆ, ಪ್ರವಾಸ, ಆಟ, ಬಂಧುಮಿತ್ರರ ಒಡನಾಟ – ಹೀಗೆ ಗೊತ್ತಿರುವ ಪರಿಸರದಲ್ಲೇ ಘಟಿಸುವ ಪ್ರಸಂಗಗಳನ್ನೇ ಆಪ್ತ ಹಾಗೂ ಕಚಗುಳಿ ಧಾಟಿಯಲ್ಲಿ ಈ ಕಥನಗಳು ನೆನಪಿಸುತ್ತವೆ. ಮಕ್ಕಳಿಗೆ ನೀತಿಯನ್ನು ದಾಟಿಸುವ ಹಟದಿಂದ ಮುಕ್ತವಾಗಿರುವ 'ಅವಳಿ', ಮಕ್ಕಳ ಮನಸ್ಸನ್ನು ಹಗುರಗೊಳಿಸುವಂತಿದೆ. ಮಕ್ಕಳ ಭಾವಕೋಶವನ್ನು ನೈತಿಕವಾಗಿ ಗಟ್ಟಿಗೊಳಿಸುವ ಸಾಧ್ಯತೆಯನ್ನೂ 'ಅವಳಿ'ಯಲ್ಲಿ ಕಾಣಬಹುದು.

**ಮೂಲ: ಮಿಲುತಿನ್ ದ್ಯೂರಿಕೋವಿಕ್, ಕ: ಕೆ. ಶಿವಲಿಂಗಪ್ಪ ಹಂದಿಹಾಳು; ಪು: 72, ಬೆ: ₹ 100; ಪ್ರ: ಅಭಿನವ, ಬೆಂಗಳೂರು. ಫೋನ್: 9448804905.**

---

## ಜೋನ್ಪುರಿ ಖಯಾಲ್




**'ಜೋನ್ಪುರಿ ಖಯಾಲ್'** ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸತೊಂದು ಟ್ರಾನ್ಸ್‌ಜೆಂಡರ್ ಕಥನ ಸೇರ್ಪಡೆಗೊಂಡಿದೆ. ಹೆಣ್ಣಾಗಿ ಹುಟ್ಟಿ, ನಲವತ್ತೇಳನೇ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಗಂಡಾಗಿರುವ ರೂಮಿ ಹರೀಶ್‌ರ 'ಬದುಕಿನ ಪುಟಗಳು' ಈ ಕೃತಿಯಲ್ಲಿ ನಿರೂಪಣೆಗೊಂಡಿವೆ. ದೈಹಿಕವಾಗಿ ಹಾಗೂ ಮಾನಸಿಕವಾಗಿ ಗೊಂದಲಗಳನ್ನು ನೀಗಿಕೊಂಡು, ಸ್ವಂತಿಕೆಯನ್ನು ಗುರ್ತಿಸಿಕೊಳ್ಳಲು ಹಂಬಲಿಸುವವರ ಜೀವನಯಾನ ಅದೆಷ್ಟು ದುರ್ಬರವಾಗಿರುತ್ತದೆ ಎನ್ನುವುದಕ್ಕೆ ರೂಮಿ ಹರೀಶ್‌ರ ಕಥನ ಉದಾಹರಣೆಯಂತಿದೆ.

ಟ್ರಾನ್ಸ್‌ಜೆಂಡರ್ ವ್ಯಕ್ತಿಯೊಬ್ಬರ ಬದುಕಿನ ಕೆಲವು ಪ್ರಸಂಗಗಳ ನಿರೂಪಣೆಯಾಗಿಯಷ್ಟೇ ಉಳಿಯದೆ, ಆ ಸಮುದಾಯದ ಬಗೆಗಿನ ಪೂರ್ವಗ್ರಹಗಳು ತಿಳಿಗೊಳ್ಳಲು ಸಹೃದಯರನ್ನು ಒತ್ತಾಯಿಸುವ ಕಾರಣದಿಂದಾಗಿ ಈ ಕಥನಕ್ಕೆ ವಿಶೇಷ ಮಹತ್ವವಿದೆ. ಸಂಯೋಜನೆಯ ದೃಷ್ಟಿಯಿಂದಲೂ ಈ ಕೃತಿ ಭಿನ್ನವಾದುದು. ಪುಸ್ತಕದ ಸಂಯೋಜನೆ ಮತ್ತು ನಿರೂಪಣೆಯಲ್ಲಿ ಕಥೆಗಾರ ದಾದಾಪೀರ್ ಜೈಮನ್‌ರ ಸೃಜನಶೀಲ ಪ್ರಯತ್ನ ಎದ್ದುಕಾಣುವಂತಿದೆ. ನೆನಪು, ಕಾವ್ಯ, ಸಂದರ್ಶನ – ಹೀಗೆ ಹಲವು ಸಾಧ್ಯತೆಗಳ ಮೂಲಕ ರೂಮಿ ಹರೀಶರನ್ನು, ಅವರು ಪ್ರತಿನಿಧಿಸುವ ಸಮುದಾಯವನ್ನು ಅರಿಯಲು ಮತ್ತು ಒಳಗೊಳ್ಳಲು ಈ ಕೃತಿ ಒತ್ತಾಸೆ ನೀಡುವಂತಿದೆ.

**ನಿ: ದಾದಾಪೀರ್ ಜೈಮನ್; ಪು: 132; ಬೆ: ₹ 165; ಪ್ರ: ಅಹರ್ನಿಶಿ, ಶಿವಮೊಗ್ಗ. ಫೋನ್: 9449174662.**